**Government of Karnataka**
**Deposition Sheet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2017 |

ದಿನಾಂಕ 10-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 2 ಫ್ರಾಸಾಃ 3

| | |
|---|---|
| ಹೆಸರು | ಮಲ್ಲಪ್ಪ |
| ತಂದೆಯ ಹೆಸರು | ದೇವಪ್ಪ |
| ವಯಸ್ಸು | 24 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಕೊಣಚಪ್ಲಿ. |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾ 1, 3 ರಿಂದ 9 ರವರ ಪರಿಚಯ ನನಗೆ ಇರುತ್ತದೆ. ದಿನಾಂಕ 31–08–2014 ರಂದು ಭಾನುವಾರದಂದು ನಾನು, ನಿಂಗಪ್ಪ ಮತ್ತು ಶರಣಬಸವ ಕೂಡಿ ಮೇವು ತರಲು ಹೊಗಿದ್ದೇವು. ನಾವು ತಂತಿಯ ಕೆಳಗಡೆ ದಾಡಿ ಹೊರಟಿದ್ದೇವು. ಕಂಬ ಬಿದ್ದು 2–3 ದಿನಗಳು ಆಗಿತ್ತು. ಅದನ್ನು ಹೊಲದ ಮಾಲೀಕರು ತೆಗೆಸಿರುವುದಿಲ್ಲ. ನಾವು ಇಬ್ಬರು ಒಳಗಡೆ ಹೊದೆವು. ಶರಣಬಸವ ತಂತಿಯ ಕೆಳಗಡೆ ದಾಟುವಾಗ ಆತನಿಗೆ ಕರೆಂಟು ಹತ್ತಿ ಅಲ್ಲೇ ಸತ್ತಿದ್ದನು. ಆರೋಪಿತರು ಯಾರು

ಬಂದಿರಲಿಲ್ಲ. ಮೃತ ಶರಣಬಸವ ನನ್ನು ಉಳಿಸಲು ನಾವು ಪ್ರಯತ್ನ ಮಾಡಿರುತ್ತೇವೆ. ಆದರೆ ಮೇನ್ ಲೈಟ್ ಇದ್ದ ಕಾರಣ ನಮಗೆ ಏನು ಮಾಡಲಾಗಲಿಲ್ಲ. ಆರೋಪಿತರ ನಿರ್ಲಕ್ಷತನದಿಂದ ಮೃತ ಶರಬಸವನು ಮೃತಪಟ್ಟಿರುತ್ತಾನೆ. ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ವಿ.ಎಚ್. ರವರಿಂದ:**
ಆರೋಪಿತರ ಪರ ವಕೀಲರ ಪರವಾಗಿ ಶ್ರೀ ವಿ.ಎಚ್. ರವರು ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ ಆದರೆ ಅವರು ಸಹ ಕಾರಣವನ್ನು ನಿಡಿರುವುದಿಲ್ಲ ಆದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಜೆ.ಎಂ.ಎಫ್.ಸಿ.3, ದೇವದುರ್ಗ**